**Karnatak University, Dharwad**
(UNIVERSITY WITH POTENTIAL FOR EXCELLENCE)
**Kousali Institute of Management Studies**
Telephone (O) 91+836+2215262
Email:directorkimskud@gmail.com

Ref No: KU/KIMS/2023-24/ 538 Date: 20.02.2024

# ಪ್ರಕಟಣೆ

**ಎಂಬಿಎ ಕೋರ್ಸುಗಳ ಬೋಧನೆಗೆ ಅತಿಥಿ/ಸಹಾಯಕ ಉಪನ್ಯಾಸಕರನ್ನು ಆಹ್ವಾನಿಸುವ ಕುರಿತು**

ಯು.ಜಿ.ಸಿಯ ನಿಯಮಗಳ ಪ್ರಕಾರ ಅರ್ಹತೆಯನ್ನು ಹೊಂದಿದ ಅಭ್ಯರ್ಥಿಗಳಿಂದ, ಕರ್ನಾಟಕ ವಿಶ್ವವಿದ್ಯಾಲಯದ ಕೌಸಾಳಿ ವ್ಯವಹಾರ ಅಧ್ಯಯನ ವಿಭಾಗಕ್ಕೆ (ಎಂಬಿಎ) ಸನ್ 2023–24ನೇ ಸಾಲಿನ ತರಗತಿಗಳಿಗೆ ಖಾಲಿ ಹುದ್ದೆ/ಹೆಚ್ಚುವರಿ ಕಾರ್ಯಭಾರದ ಅಗತ್ಯತೆ ಅನುಸಾರವಾಗಿ ಸಹಾಯಕ ಉಪನ್ಯಾಸಕ/ಅತಿಥಿ ಉಪನ್ಯಾಸಕರೆಂದು (Teaching Assistant/Guest Faculty) ಸೇವೆ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ (ಯು.ಜಿ.ಸಿ ನಿಯಮಾನುಸಾರ ನೆಟ್/ಸ್ಲೆಟ್ ಉತ್ತೀರ್ಣತೆ/ಪಿ.ಎಚ್.ಡಿ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು). ನಿಗದಿತ ಅರ್ಜಿ ನಮೂನೆಯನ್ನು ಕೌಸಾಳಿ ವ್ಯವಹಾರ ಅಧ್ಯಯನ ವಿಭಾಗದಿಂದ (ಎಂಬಿಎ) ಖುದ್ದಾಗಿ ಅಥವಾ ಕವಿವಿ ಅಂತರ್ಜಾಲ www.kud.ac.in ಮುಖಾಂತರ ಪಡೆಯಬಹುದು.

ಸೂಕ್ತ ಮಾಹಿತಿಯೊಂದಿಗೆ ಭರ್ತಿಮಾಡಿದ ಅರ್ಜಿ, ಅಗತ್ಯ ದೃಡೀಕೃತ ಅಡಕಗಳು ಹಾಗೂ ಹಣಕಾಸು ಅಧಿಕಾರಿಗಳು ಕವಿವಿ, ಧಾರವಾಡ ಇವರ ಹೆಸರಿನಲ್ಲಿ ಪಡೆದ ರೂ.600/– (ರೂ.300/–ಪಜಾ/ಪ.ಪಂ/ಪ್ರ–1) ರ ನಿರ್ವಹಣಾ ಶುಲ್ಕದ ಹುಂಡಿಯೊಂದಿಗೆ ದಿನಾಂಕ:26.02.2024 ಒಳಗಾಗಿ ನಿರ್ದೇಶಕರು, ಕೌಸಾಳಿ ವ್ಯವಹಾರ ಅಧ್ಯಯನ ವಿಭಾಗ (ಎಂಬಿಎ) ಕ.ವಿ.ವಿ, ಧಾರವಾಡ ಇವರಿಗೆ ಸಲ್ಲಿಸುವುದು.

ದಿನಾಂಕ:23.09.2022 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ:02 ರ ನಿರ್ಣಯದ ಪ್ರಕಾರ ಯುಜಿಸಿ ನಿಯಮಾವಳಿಗಳ ಅನುಸಾರ ಸಹಾಯಕ ಉಪನ್ಯಾಸಕ/ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಯುಜಿಸಿ ಮತ್ತು ನಾನ್ ಯುಜಿಸಿ ಅರ್ಹತೆಯ ಅನುಸಾರ ಪ್ರಸ್ತುತ ಇರುವ ರೋಸ್ಟರ್ ಹಾಗೂ ಮೆರಿಟ್ ಅನುಗುಣವಾಗಿ ಸಂಬಂಧಪಟ್ಟ ಹುದ್ದೆಗಳಿಗೆ ಸಂದರ್ಶನ ಜರುಗಿಸುವ ಮೂಲಕ ಸೇವೆಯನ್ನು ಪಡೆಯಲಾಗುವುದು.

ಹೆಚ್ಚುವರಿಯಾಗಿ ಉಳಿದ ಕಾರ್ಯಭಾರದ ಬೋಧನೆಗಾಗಿ ಅಗತ್ಯತೆ ಮೇರೆಗೆ (against the workload and not against the sanctioned posts) ನಿಗದಿತ ಅವಧಿಗೆ ಮಾತ್ರ ಸಹಾಯಕ ಉಪನ್ಯಾಸಕರ/ಅತಿಥಿ ಉಪನ್ಯಾಸರನ್ನು ಅಹ್ವಾನಿಸಲಾಗಿದೆ.

ಸಮಾಲೋಚನೆ/ಸಂದರ್ಶನದ ದಿನಾಂಕ ಮತ್ತು ಸಮಯವನ್ನು ತಾವು ನೀಡಿದ E-mail ID. ಮುಖಾಂತರ ತಿಳಿಸಲಾಗುವುದು.

A. Chennappa

ಕುಲಸಚಿವರು